ಅಲ್ಲೆಲ್ಲೊ ಇದ್ದಿರಬಹುದು. ಆದರೆ, ಅವೆಲ್ಲ ಖಾಸಗಿ ಸ್ಥಳಗಳು. ಸಮುದ್ರದ ಮಧ್ಯದಲ್ಲಿದ್ದರೂ, ಬಾಯಾರಿಕೆಯಿಂದ ಬಳಲುವ ದೈನ್ಯಸ್ಥಿತಿ.

'ಕುಡಿಯಲು ನೀರು ಬೇಕಿತ್ತು, ಕೊಡ್ತಿರಾ ಪ್ಲೀಜ್' ಎಂದು ಕೇಳುವ ಹಾಗೆ, ಯಾರ್‍ದ್ಯಾರದೊ ಮನೆಯ ಮುಂದೆ ನಿಂತು, 'ನನಗೆ ಮೂತ್ರಿಸುವ ಜರೂರಿ ಇದೆ. ನಿಮ್ಮ ವಾಶ್‌ರೂಮ್ ಬಳಸಬಹುದೆ?' ಎಂದು ವಿನಂತಿಸಲಾದೀತೆ. ಯಾವುದಾದರೂ ಹೋಟೆಲ್‌ಗೆ ಹೋಗಿ ಕಾರ್ಯ ಪೂರೈಸಬಹುದಾಗಿತ್ತಲ್ಲ? ಈ ವಿಚಾರ ಆವಾಗ ಯಾಕೆ ಹೊಳೆಯಲಿಲ್ಲ ಎಂಬುದು ಈಗಲೂ ತಿಳಿಯುತ್ತಿಲ್ಲ.

ಆಯ್ತು. ಭಾರವಾದ ಸೂಟ್‌ಕೇಸ್ ಹಿಡಿದುಕೊಂಡು, ಸಾರ್ವಜನಿಕ ಮೂತ್ರಾಲಯದ ಅನ್ವೇಷಣೆಗೆ ಮುಂದಾದೆ. ಅಲ್ಲಿದ್ದ ಜನಸಾಗರ, ವಾಹನಗಳ ಭರಾಟೆ ನನ್ನ ಮುಂದೆ ಏನು ಮಹಾ ಎಂಬಂತೆ ಅವುಗಳನ್ನೆಲ್ಲ ನಗಣ್ಯಗೊಳಿಸಿ, 'ಒಂದರ' ಕರೆ ಕಿಬ್ಬೊಟ್ಟೆಯೊಳಗೆ ಹೆಡೆಯಾಡಿಸತೊಡಗಿತು ಜೋರುಜೋರಾಗಿ, ಬೇಡಬೇಡ ಅಂದಷ್ಟೂ ಹೆಚ್ಚೆಚ್ಚಾಗುವ ಮನೋಕಾಮನೆಯಂತೆ.

ಹುಡುಹುಡುಕುತ್ತ ಹಾಗೆ ಬಂದವನು, ಗುಬ್ಬಿ ಥಿಯೇಟರ್ ಮುಂದೆ ನಿಂತಿದ್ದೆ. ಅವಶ್ಯಕತೆ ಎನ್ನುವುದು ಅನ್ವೇಷಣೆಯ ತಾಯಿ ಎನ್ನುತ್ತಾರೆ, ಸುಳ್ಳಲ್ಲ. ಇನ್ನೇನು ನಾಟಕ ಸುರುವಾಗುವುದರಲ್ಲಿತ್ತು. ಹೊರಗಡೆ ಒಂದಿಷ್ಟು ಜನರಿದ್ದರು. ಅವರ ಕಣ್ಣುಗಳು ನನ್ನತ್ತ ಹರಿದವು. ಮೂತ್ರಿಸುವುದು ನನ್ನ ಏಕಮಾತ್ರ ಉದ್ದೇಶವೆಂಬುದು ಅವರಿಗೆ ತಿಳಿಯಬಾರದಲ್ಲ. ಟಿಕೆಟ್ ಕೌಂಟರ್ ಮುಂದೆ ನಿಂತು, 'ಎಷ್ಟಕ್ಕರಿ ನಾಟಕಾ?' ಎಂದು ಕೇಳುಕೇಳುತ್ತ ಮೂತ್ರಾಲಯದತ್ತ ಧಾವಿಸಿದೆ. ನಂತರ ಏಕೀಕರಿಸಿದ ನಿಟ್ಟುಸುರಿನೊಂದಿಗೆ ಹೊರಬಂದರೆ, ಕೌಂಟರಿನವ ಕೈಯಲ್ಲಿ ಟಿಕೆಟ್ ಹಿಡಿದುಕೊಂಡು ನನಗಾಗಿ ಕಾಯುತ್ತಿದ್ದಾನೆ.

'ಏನು ಒಂದಾ?'

'ಹೌದ್ರಿ, ಒಂದಕ್ಕೆ... ಹ್ಹಿ ಹ್ಹಿ ಹಿ' ಹಲ್ಲುಕಿಸಿದೆ. ನನ್ನ ಕಳ್ಳ ಉದ್ದೇಶ ಅದ್ಹೇಗೆ ಇವನಿಗೆ ಗೊತ್ತಾಯಿತೊ? ಎಷ್ಟಾಗಲಿ ನಾಟಕದ ಜನ!

'ಫಿಫ್ಟಿ ರುಪೀಜ್ ಓನ್ಲಿ... ಫ್ರಂಟ್ ರೋ ಸೀಟು ಸರ್' ಟಿಕೇಟ್ ಕೈಗಿತ್ತೇ ಬಿಟ್ಟ. 'ಸ್ಸಾರಿ, ನಾಟಕಾ ನೋಡ್ಲಿಕ್ಕೆ ಬಂದಿಲ್ರೀ... ಒಂದಕ್ಕಂತ ಬಂದಿದ್ದೆ' ಎಂದು ನುಣುಚಿಕೊಳ್ಳಬೇಕೆನಿಸಿದರೂ, ಹೊರಗಡೆ ನಿಂತಿದ್ದರಲ್ಲ ಆ ಜನ ನನ್ನನ್ನೆ ದಿಟ್ಟಿಸಿ ನೋಡುತ್ತಿದ್ದಾರೆ. ಮರುಮಾತನಾಡದೆ, ಐವತ್ತರ ನೋಟೊಂದನ್ನು ಆತನ ಕೈಗಿತ್ತೆ. ಆತ ಕೊಟ್ಟ ಟಿಕೇಟ್ ಜೇಬಿಗಿಳಿಸುತ್ತ, ಸೀದಾ ರಸ್ತೆಗೆ ಬಂದೆ.

ಅಲ್ಲಿಂದ ಸೀದಾ ಬಸ್‌ನೆಡೆಗೆ ಬಂದರೆ, ಎಲ್ಲರೂ ಕೆಂಗಣ್ಣಿನಿಂದ ನೋಡುತ್ತಿದ್ದಾರೆ... 'ಅದೇನ್ರೀ!... ಇಷ್ಟೊತ್ತಿನವರೆಗೆ ಇಲ್ಲಿದ್ದವ್ರು, ಬಸ್ ಬಿಡೊ ಟೈಮಕ್ಕೇ ಎಲ್ಲಿಗ್ರೀ ಹೋಗಿದ್ದು?' ಕ್ಯಾಕರಿಸಿ ಉಗಿಯುವ ಹಾಗೆ ಡ್ರೈವರ್ ಕೇಳುತ್ತಿದ್ದಾನೆ. ಆತನ ಮಾತಿಗೆ ಕೆಲವರು ಮುಸಿಮುಸಿ ನಗುತ್ತ ಸಾಥ್ ಕೊಡುತ್ತಿದ್ದಾರೆ.

ರೈಲು ಅಡ್ಡಿಯಿಲ್ಲ. ಬಸ್ಸನದೇ ಗೋಳು. ಆ ಕಂಡಕ್ಟರ್ ಎಂಬ ಡಿಕ್ಟೇಟರ್‌ನ ಮರ್ಜಿ ಕಾಯುವುದೆಂದರೆ, ಬೇಟೆ ನಾಯಿಯನ್ನು ಪಳಗಿಸಿದಂತೆ. ಆ ಮಹಾನುಭಾವ ಉದಾರಿಯೊ, ಅನುದಾರಿಯೊ ಅಂತೆಲ್ಲ ಆತನ ಗುಣಾವಗುಣಗಳನ್ನು ಕೂಡಿಸಿ, ಕಳೆದು, ಭಾಗಿಸಿ, ಲೆಕ್ಕಹಾಕುತ್ತೇನೆ. ಆತನ ಉದಾರತೆ ಬಳಸಿಕೊಳ್ಳುವಂತಿದ್ದರೆ ನೀವು ಸುದೈವಿ! ಬೇಕುಬೇಕೆನಿಸಿದಾಗೆಲ್ಲ ಮೂತ್ರಿಸಿ ಬರಬಹುದು. ಆದರೆ, ಅಂಥ ಉದಾರಿಗಳು ತೀರ ಕಮ್ಮಿ.

'ಹಂಗಿದ್ದಾವ್ರು ಸ್ವಂತ ಗಾಡಿ ಮಾಡಿಕೊಂಡು ಪ್ರವಾಸ ಮಾಡ್ಬೇಕ್ರಿ. ಸುಮ್‌ಸುಮ್ಮನೆ ಪಬ್ಲಿಕ್‌ಗ್ಯಾಕ್ ತ್ರಾಸ ಕೊಡ್ತೀರಿ' ಮುಖ ಮೆಣಸಿನಕಾಯಿ ಮಾಡಿ ಮೂದಲಿಸುವ ಅನುದಾರಿಗಳೆ ಎಲ್ಲ.

★★★